**ಸಾಕ್ಷಿಯನ್ನು ದಿಃ18.07.2018 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ವಾದಿ ಪರ ಶ್ರೀ ಎನ್.ಎನ್ ವಕೀಲರಿಂದಃ**

ಈಗ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದೇನೆ ಹಾಗೂ ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿರುತ್ತವೆ ಮತ್ತು ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ.

ದಾವಾ ಅನುಸೂಚಿ 2ರ ಆಸ್ತಿ ಮುನೇಗೌಡ ಎಂಬುವವರಿಗೆ ಕ್ರಯವಾದ ಬಗ್ಗೆ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಹಾಗೂ ದಿಃ23.08.1956ರಂದು ಸದರಿ ಮುನೇಗೌಡರವರಿಂದ ಸೊಣ್ಣಪ್ಪ ಮತ್ತು ಸೀತಪ್ಪ ಎಂಬುವವರಿಗೆ ಸದರಿ ಕ್ರಯವಾದ ಬಗ್ಗೆ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದು 1 ಪುಟವನ್ನು ಮಾತ್ರ ಒಳಗೊಂಡಿದ್ದು ಅದನ್ನು ನಿಪಿ-2 ಎಂದು ಗುರ್ತಿಸಲಾಯಿತು. ದಾವಾ ಆಸ್ತಿಗೆ ಸಂಬಂಧಪಟ್ಟಂತೆ 20 ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-3 ರಿಂದ 22 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎನ್.ಎಸ್ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**(ಎ.ಸಿ. ದಯಾನಂದ ಮೂರ್ತಿ)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬಂಗಾರಪೇಟೆ.**